ಪಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ದಿಃ 21-01-2026**

ಪಾಟೀ ಸವಾಲು : 1 ಮತ್ತು 2 ನೇ ಪ್ರತಿವಾದಿಗಳ ಪರಃ ಶ್ರೀ ಐ.ಆರ್.ಬಿ. ವಕೀಲರಿಂದಃ

ನಮ್ಮ ಆಸ್ತಿಗೆ ತಾಗಿಕೊಂಡು ಉತ್ತರದಲ್ಲಿ ಆನೆಕ್ಯಾರು ಪ್ರದೇಶ ಇದೆ. 1 ನೇ ಪ್ರತಿವಾದಿಯ ಆಸ್ತಿ ನಮ್ಮ ಆಸ್ತಿಗೆ ತಾಗಿಕೊಂಡಿರುವುದಿಲ್ಲ. ನಮ್ಮ ಆಸ್ತಿಯ ಪಶ್ಚಿಮಕ್ಕೆ 1 ನೇ ಪ್ರತಿವಾದಿಯ ಅಸ್ತಿ ಇದೆ ಎಂದು ಈ ದಾವೆಯನ್ನು ಸಲ್ಲಿಸುವಾಗ ವಕೀಲರಿಗೆ

ಅನುಭವ ನೀಡಿರುವುದಿಲ್ಲ. 1 ನೇ ಹಾಗೂ 2 ನೇ ಪ್ರತಿವಾದಿಯ ಆಸ್ತಿ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ನಮ್ಮ ಮನೆಯಿಂದ ಜೋಡುರಸ್ತೆ ಒಂದೂವರೆ ಕಿ. ಮೀಟರು ದೂರ ಇದೆ. ನಮ್ಮ ಮನೆಯ ಪಶ್ಚಿಮಕ್ಕೆ ಪಟ್ಲಾ ಇದೆ. ಪಟ್ಲಾ ಎಂದರೆ ಗದ್ದೆ. ಅಶ್ವಥಪುರ ನನ್ನ ಮನೆಯ ಪೂರ್ವದಲ್ಲಿದೆ. ಜೋಡುರಸ್ತೆ ದಾಟಿ ಅಶ್ವಥಪುರ ದಾಟಿ ನಮ್ಮ ಮನೆ ಇದೆ. ನಿಪಿ-11 ರಲ್ಲಿ ಕಾಣಿಸಿದ ರಸ್ತೆ ನಮ್ಮ ಮನೆಗೆ ಬರುವ ರಸ್ತೆಯಾಗಿದ್ದು, 10-12 ಅಡಿ ಅಗಲ ಇದೆ. ಅದು ಸರ್ವೇ ನಂಬರ್ 64/2 ಎ 1 ರಲ್ಲಿ ಬರುತ್ತದೆ. ಈ ರಸ್ತೆ ಬೆಂಜಮಿನ್ ಡಿ ಸೋಜಾ ರವರ ಕಾಲದಿಂದಲೂ ಇದೆ. ಈ ರಸ್ತೆ ಜೋಡುರಸ್ತೆಯಿಂದ ಹೊರಟು ಬೇರೆ ಬೇರೆಯವರ ಆಸ್ತಿಗಳಲ್ಲಿ ಹೋಗಿ ನಮ್ಮ ಮನೆಗೆ ಬರುತ್ತದೆ. ನಮ್ಮ ಮನೆಯವರೆಗೆ ಇರುವ ರಸ್ತೆಯ ಭಾವಚಿತ್ರವನ್ನು ಹಾಜರುಪಡಿಸದೇ ಇರಲು ಸಕಾರಣಗಳಿಲ್ಲ.

ನಿಪಿ-9 ನಮ್ಮ ಮನೆಯ ಒಳಗೆ ಬರುವ ರಸ್ತೆ. ನಿಪಿ-8 ರಲ್ಲಿ ಕಾಣಿಸುವ ರಸ್ತೆ ಸುಮಾರು ಒಂದೂವರೆ ಕಿ.ಮೀಟರು ಇದೆ ಎಂದರೆ ಇರಬಹುದು. ನಿಪಿ-8 ರಸ್ತೆ ವಾಹನಗಳು ಓಡಾಡುವ ರಸ್ತೆ ಎಂದರೆ ಅಲ್ಲ. ನಿಮ್ಮ ಬಳಿ ವಾಹನಗಳು ಇವೆಯಾ ಎಂದರೆ ಇವೆ. 2004 ರಿಂದಲೂ ನಮ್ಮ ಬಳಿ ವಾಹನ ಇದೆ. ಅಶ್ವಥಪುರದವರೆಗೆ ಪೈಪ್ ಲೈನ್ ಬಂದಿದ್ದು, ನಂತರ ನಾವು ದಾವೆ ದಾಖಲಿಸಿರುತ್ತೇನೆ. ನಿಪಿ-9 ರಲ್ಲಿ ರಸ್ತೆಯ ಬದಿಯಲ್ಲಿ ಪೈಪ್ ಲೈನ್ ಹಾಕಲು ಅಗೆದ ಹಾಗೆ ಕಾಣುತ್ತದೆ ಎಂದರೆ ಸರಿ.

ಸದ್ರಿ ಪೈಪ್ ಲೈನ್ ನ್ನು ಕುಕುಂದೂರು ಗ್ರಾಮ ಪಂಚಾಯತು ರವರು ಹಾಕಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ. ಬೆಂಜಮಿನ್ ಡಿ ಸೋಜಾ ರವರಿಗೆ ದಾವಾ ಆಸ್ತಿ ಹೇಗೆ ಬಂತು ಎಂದು ನನ್ನ ಬಳಿ ದಾಖಲೆ ಇದೆ. ನಿಪಿ-2 ರ ಮೂಲ ದಾಖಲೆ ನನ್ನ ಮನೆಯಲ್ಲಿದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ದಾವಾ ಆಸ್ತಿಯ ಸರ್ವೇ ನಂಬರ್ 64/2 ಎ 1 ರಲ್ಲಿ 1 ಎಕರೆ 20 ಸೆಂಟ್ಸು, ಸರ್ವೇ ನಂಬರ್ 63/2 ರಲ್ಲಿ 56 ಸೆಂಟ್ಸು ಇರುತ್ತದೆ. ದಾವಾ ಆಸ್ತಿಯ ಗಡಿಗಳನ್ನು ಸರಿಯಾಗಿ

ಹೇಳಲು ಬರುವುದಿಲ್ಲ. ದಾವಾ ಆಸ್ತಿಯ ನಕ್ಷೆ ನನ್ನ ಬಳಿ ಇದೆ. ದಾವಾ ಆಸ್ತಿಯನ್ನು ಅಳತೆ ಮಾಡಿ, ಗಡಿ ಗುರುತು ಮಾಡಿಸಿರುತ್ತೇವೆ. ಈ ಬಗ್ಗೆ ದಾಖಲೆ ಇದೆ. ದಾವಾ ಆಸ್ತಿಯಲ್ಲಿ ನನಗೆ ಹಾಗೂ 1ನೇ ವಾದಿಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಯಾವ ಕಾರಣಕ್ಕಾಗಿ ಪಂಚಾಯತ್ ನವರು ಪೈಪ್ ಲೈನ್ ಹಾಕಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಯಾರ ಜಾಗದಲ್ಲಿ ಬಾವಿ ಇದೆ ಎಂದು ತಿಳಿದುಕೊಂಡಿರುವುದಿಲ್ಲ. ತಹಶೀಲ್ದಾರ್ ರವರು ಕುಡಿಯುವ ನೀರಿಗೆ ಪೈಪ್ ಲೈನ್ ಹಾಕಲು ಆದೇಶ ಮಾಡಿದ್ದ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಪ್ರತಿವಾದಿಗಳು ಲಿಖಿತ ಹೇಳಿಕೆಯನ್ನು ಸಲ್ಲಿಸಿದ ನಂತರವೂ ಕುಡಿಯುವ ನೀರಿಗಾಗಿ ಪೈಪ್ ಲೈನ್ ಹಾಕಲಾಗಿದೆ ಎಂದು ತಿಳಿದುಕೊಂಡಿರುವುದಿಲ್ಲ. ನಾನು ಪೋಲಿಸರಿಗೆ ದೂರು ಕೊಟ್ಟಾಗ ಸಿವಿಲ್ ದಾವೆ ಎಂದು ಪೋಲಿಸರು ಹೇಳಿರುತ್ತಾರೆ. ನನ್ನ ಮನೆಯ ಮೂಲಕವೇ ಅಶ್ವಥಪುರ ಹಾಗೂ ಪಟ್ಲಕ್ಕೆ ಹೋಗಬೇಕು ಎಂದರೆ ಸರಿಯಲ್ಲ. ಪೈಪ್ ಲೈನ್ ಪಟ್ಲಾದವರೆಗೆ ಹೋಗಿದೆ. ಅಶ್ವಥಪುರದವರೆಗೂ ಹೋಗಿದೆಯಾ ಎಂದರೆ ನನಗೆ ಮಾಹಿತಿ ಇಲ್ಲ. ಪಟ್ಲಾದ ಯಾರ ಮನೆಯವರೆಗೆ ಪೈಪ್ ಲೈನ್ ಹೋಗಿದೆ ಎಂದು ಮಾಹಿತಿ ಇಲ್ಲ. ಆ ಬಗ್ಗೆ ಪಂಚಾಯತ್ ನಲ್ಲಿ ವಿಚಾರಿಸಿರುವುದಿಲ್ಲ. ಪಟ್ಲಾದಲ್ಲಿ ಬೇರೆ ಮನೆಗಳು ಇಲ್ಲ. ಸದ್ರಿ ಪೈಪ್ ಲೈನ್ ನ್ನು ಸಾರ್ವಜನಿಕ ರಸ್ತೆಗೆ ಹಾಕಿದ್ದಾರೆ ಎಂದರೆ ಸಾಕ್ಷಿ ನನ್ನ ಜಾಗಕ್ಕೆ ಹಾಕಿದ್ದಾರೆ.

ಜೋಡುರಸ್ತೆಯಿಂದ ಪಟ್ಲಾಕ್ಕೆ ಹೋಗಿ ಅಶ್ವಥಪುರಕ್ಕೆ ಹೋಗುವ ರಸ್ತೆಯ ಅಡಿಯಲ್ಲಿ ಪೈಪ್ ಲೈನ್ ಹಾಕಿದ್ದಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನ್ಯಾಯಾಲಯದ ಆಯುಕ್ತರನ್ನು ನೇಮಕ ಮಾಡಿ ಮಾಹಿತಿ ಪಡೆಯುವ ಬಗ್ಗೆ ನಿಮ್ಮ ಆಕ್ಷೇಪಣೆ ಇದೆಯಾ ಎಂದರೆ ಇಲ್ಲ. ನಾನು ಮತ್ತು ನನ್ನ ತಾಯಿ, ಪ್ರತಿವಾದಿಗಳು ಹುಟ್ಟುವ ಮೊದಲೇ ರಸ್ತೆ ಇತ್ತು ಎಂದರೆ ಸಾಕ್ಷಿ ನಮ್ಮ ಖಾಸಗಿ ಜಾಗದಲ್ಲಿ ನಮ್ಮ ಮನೆಯವರೆಗೆ ರಸ್ತೆ ಇದೆ. ಈ ರಸ್ತೆಯನ್ನು ಅಶ್ವಥಪುರ-ಪಟ್ಲ ರಸ್ತೆ

ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ. ಈ ರಸ್ತೆ ಕವಲಾಗಿ ಹಲೀವು ಮನೆಗಳಿಗೆ ಹೋಗುತ್ತದೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಮರ ಕಡಿದಿದ್ದಾರೆ ಎಂದು ತಿಳಿಸಿದ್ದು, ಈ ಬಗ್ಗೆ ಅರಣ್ಯಾಧಿಕಾರಿಗಳಿಗೆ ದೂರು ಕೋಟ್ಟಿರುವುದಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ